# ಸಹೃದಯರ ಸ್ಪಂದನ



## ಸುದೀರ್ಘ ರಂಗಪಯಣದ ನೆನಪಿನ ಬುತ್ತಿಗಂಟು...

ಜುಲೈ ತಿಂಗಳ 'ಮಯೂರ' ಮಾಸಪತ್ರಿಕೆಯಲ್ಲಿ ಲೇಖಕಿ ಲಲಿತಾ ಹೊಸಪ್ಯಾಟಿ ಅವರು 'ಜೀವನವೇ ಒಂದು ನಾಟಕ' ಹಿರಿಯ ರಂಗನಟಿ ಮರಿಯಮ್ಮನಹಳ್ಳಿ ನಾಗರತ್ನಮ್ಮ ಅವರೊಂದಿಗೆ ನಡೆಸಿದ ಮಾತುಕತೆ, ಹಲವು ಮಹಿಳಾ ವೃತ್ತಿರಂಗ ಕಲಾವಿದರ ಬದುಕಿನ ಕೈಗನ್ನಡಿಯಂತಿದೆ.

ಅವ್ವನ ಬಗ್ಗೆ ಮಕ್ಕಳಾದ ನಮಗೂ ಗೊತ್ತಿರದ ಅನೇಕ ಅಂಶಗಳನ್ನು ಪ್ರಸ್ತಾಪಿಸಿದ್ದಾರೆ. ಅವ್ವ ರಂಗಭೂಮಿಯನ್ನು ಬೃಹತ್ ಆಲದ ಮರದ ರೀತಿಯಲ್ಲಿ ಪೂಜಿಸಿ, ಅದರ ಘಮದಲ್ಲೇ ಉಸಿರಾಡಿದವಳು. ಹಲವು ಆಹ್ಲಾದಕರ, ಕೆಲವು ಉಸಿರು ಕಟ್ಟಿಸಿರುವ ಪ್ರಸಂಗಗಳನ್ನು ದಿಟ್ಟೆಯಾಗಿ ಎದುರಿಸಿದಾಕೆ. ಅದರ ಪ್ರತಿಫಲಗಳನ್ನು ಈಗ ಕಾಣುತ್ತಿದ್ದಾಳೆ.

ತಾನು ಬಾಳಿ, ಬದುಕಿದ ಗ್ರಾಮೀಣ ವೃತ್ತಿ ರಂಗಭೂಮಿ ಹಾಗೂ ತಾನಾಗಿ ಹುಡುಕಿಕೊಂಡು ಬಂದ ಹವ್ಯಾಸಿ ರಂಗಭೂಮಿ ಎರಡರಲ್ಲೂ ಅವ್ವ ತನ್ನ ಛಾಪನ್ನು ಮೂಡಿಸಿದ್ದಾಳೆ. ಅಭಿನಯಿಸಿದ ಎರಡು ಸಾವಿರಕ್ಕೂ ಹೆಚ್ಚಿನ ನಾಟಕಗಳ ಸುಮಾರು ಇಪ್ಪತ್ತು ಸಾವಿರ ಪ್ರದರ್ಶನಗಳು ಸುಖ-ದುಃಖ ಎರಡರ ಸಮ್ಮಿಲನದ ವಿಭಿನ್ನ ಅನುಭವ ನೀಡಿರುವುದು ಮರೆಯುವಂತಿಲ್ಲ. ಪೌರಾಣಿಕ, ಐತಿಹಾಸಿಕ, ಸಾಮಾಜಿಕ, ಜಾನಪದ, ಭಕ್ತಿ ಪ್ರಧಾನ, ಬೀದಿನಾಟಕ ಹೀಗೆ ಎಲ್ಲ ಪ್ರಕಾರಗಳಲ್ಲಿ ತನ್ನ ಪ್ರತಿಭೆಯನ್ನು ಮೆರೆದಾಕೆ. ಸಂದರ್ಶನವು ರಂಗಭೂಮಿಯ ಹಲವು ಹೊಳಹುಗಳನ್ನು, 60 ವರ್ಷಗಳ ಸುದೀರ್ಘ ಪಯಣದ ಹಾದಿಯನ್ನು ಬಿತ್ತರಿಸುತ್ತಾ ಹೋಗುತ್ತದೆ. ರಂಗಭೂಮಿಯ ಎಲ್ಲ ವಿದ್ಯಾರ್ಥಿಗಳು ತಪ್ಪದೇ ಓದಲೇಬೇಕಾದ ಬರಹ.

ನಾನು ಮುಂಬೈ ಕನ್ನಡಿಗಳಾಗಿ ಓದಿ, ಇಲ್ಲಿಯ ಸ್ನೇಹಿತರಿಗೂ ಈ ಲೇಖನದ ಸವಿಯನ್ನು ಹಂಚಿದ್ದೇನೆ. ಲೇಖಕಿ ಮತ್ತು ಸುಂದರ ಛಾಯಾ ಚಿತ್ರಗಳೊಂದಿಗೆ ಪ್ರಕಟಿಸಿದ 'ಮಯೂರ' ಬಳಗಕ್ಕೆ ನಾನು ಸದಾ ಋಣಿ. ರಂಗಭೂಮಿಯ ಗ್ರಾಮೀಣ ಕಲಾವಿದರ ಮತ್ತಷ್ಟು ಲೇಖನಗಳು ಮುಂದೆ ಪ್ರಕಟವಾಗಲಿ.

ಪಂಕಜ ಕೆ., ಥಾಣೆ, ಮಹಾರಾಷ್ಟ್ರ

ಲಲಿತಾ ಕೆ. ಹೊಸಪ್ಯಾಟಿ ಅವರ ಬರಹ ಹಲವು ಹೊಸ ಒಳನೋಟಗಳನ್ನು ನೀಡಿತು. ನಾಗರತ್ನಮ್ಮನವರು ಹೇಳಿದಂತೆ 'ನಾನೇ ರಂಗಭೂಮಿಗೆ ಕಡಿಮೆ ಮಾಡಿದೆ. ರಂಗಭೂಮಿಯಿಂದ ಪಡೆದದ್ದು ಸಾಗರದಷ್ಟು' ಎಂಬ ಜೀವನತತ್ವವನ್ನು ನಮಗೆಲ್ಲ ಮನಗಣಿಸಿದ್ದಾರೆ.

ದೇವೀಂದ್ರಪ್ಪ, ಕನ್ನಡ ವಿಶ್ವವಿದ್ಯಾಲಯ ಹಂಪಿ

ನಾಗರತ್ನಮ್ಮ ಅವರ ಸಂದರ್ಶನ ಅತ್ಯುತ್ತಮವಾಗಿ ಮೂಡಿಬಂದಿದೆ. ಬೇಂದ್ರೆಯವರು ಹೇಳುವಂತೆ ಪಟ್ಟ ಪಾಡೆಲ್ಲವನ್ನೂ ಹಾಡಾಗಿಸಿದವರು...ಹೀಗೆ ಮತ್ತೆ ಮತ್ತೆ ಓದಬೇಕೆನಿಸುತ್ತದೆ.

ಡಾ.ವಾಗೀಶ ಎಂ.ಆರ್., ಹೊಸಪೇಟೆ

'ಜೀವನವೇ ಒಂದು ನಾಟಕ' ಬರೀ ಕೆ.ನಾಗರತ್ನಮ್ಮ ಅವರ ಸಂದರ್ಶನವಲ್ಲ. ಇಬ್ಬರು ತಾಯಂದಿರ ನಡುವಿನ ಮಾತುಕಥೆಯಂತೆ ಭಾಸವಾಯ್ತು. ಒಬ್ಬ ಕಲಾವಿದೆಯ ಕಲಾ ಕೈಂಕರ್ಯದ ಹಿಂದೆ ಒಬ್ಬ ಮಹಿಳೆಯ ಬದುಕು ಬವಣೆಯ ಸ್ತ್ರೀ ಸಂವೇದನೆಯೂ ಸಹ ಸಹಜವಾಗಿ, ಸ್ಪಷ್ಟವಾಗಿ ಪಡಿಮೂಡಿದೆ.

ಹುರುಕಡ್ಲಿ ಶಿವಕುಮಾರ, ಬಾಚಿಗೊಂಡನಹಳ್ಳಿ

ಹೆಗ್ಗಾಪುರ ರಾಘವೇಂದ್ರ ಕುಲಕರ್ಣಿ,ಹೊಸಪೇಟೆ

ರವಿ ಯಲಿಗಾರ, ಮುನವಳ್ಳಿ